ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಹೆಚ್.ಆರ್.ಎಂ.ಎಸ್/ಅಶಾಸ-1/2016-17 ದಿನಾಂಕ:27-12-2016

ಯೋಜನಾಧಿಕಾರಿಗಳು
ಹೆಚ್.ಆರ್.ಎಂ.ಎಸ್. ವಿಭಾಗ
ಬಹು ಮಹಡಿಗಳ ಕಟ್ಟಡ
ಬೆಂಗಳೂರು-1

ಮಾನ್ಯರೇ,

ವಿಷಯ: ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಗುಂಪನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಗ್ರೂಪ್ 'ಸಿ ' ಎಂದು ಪರಿಗಣಿಸುವ ಬಗ್ಗೆ.

ಉಲ್ಲೇಖ:1. ನಿರ್ದೇಶಕರು [ಪ್ರೌಢ ಶಿಕ್ಷಣ] ಇವರ ಟಿಪ್ಪಣಿ ಪತ್ರ ಸಂಖ್ಯೆ. ಸಿ8(7)ಶಾಶಿಅ.ಮಿಶಿಗ್ರೂಪ್-ಬಿ.29/2016-17 ದಿ:22.12.2016.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾಶಿಇ, ರಾಮದುರ್ಗ ಇವರ ಪತ್ರ ದಿ:11.11.2016 ಮತ್ತು ಗುಂಪು ಬದಲಾವಣೆಗೆ ಆನ್‌ಲೈನ್‌ನಲ್ಲಿ ಬರುತ್ತಿರುವ ರಿಕ್ವೆಸ್ಟ್‌ಗಳು.

&&&

ವಿಷಯ ಹಾಗೂ ಉಲ್ಲೇಖಿತ ಪತ್ರಗಳಿಗೆ ಸಂಬಂಧಿಸಿದಂತೆ, ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಗುಂಪನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಗ್ರೂಪ್-ಬಿ ಎಂದು ಪರಿಗಣಿಸಲು ಅನುದಾನಿತ ಪ್ರೌಢಶಾಲಾ ಶಿಕ್ಷಕರು ಆನ್‌ಲೈನ್ ರಿಕ್ವೆಸ್ಟ್ ನೀಡುತ್ತಿರುತ್ತಾರೆ ಹಾಗೂ 3481 ಕ್ಕಿಂತಲೂ ಹೆಚ್ಚಿನ ಮುಖ್ಯ ಶಿಕ್ಷಕರು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಗ್ರೂಪ್-ಬಿ ಎಂದು ಮಾಡಿಕೊಂಡಿರುತ್ತಾರೆ. ಆದ ಕಾರಣ ಈ ಮುಖ್ಯ ಶಿಕ್ಷಕರುಗಳು ಗ್ರೂಪ್-ಬಿ ಗೆ ಸೇರುತ್ತಾರೆಯೇ? ಎಂಬ ಬಗ್ಗೆ ನಿರ್ದೇಶಕರು, ಪ್ರೌಢ ಶಿಕ್ಷಣ ರವರಿಗೆ ಮಾರ್ಗದರ್ಶನ ನೀಡುವಂತೆ ಕೋರಲಾಗಿತ್ತು.

ಸದರಿ ವಿಷಯದ ಬಗ್ಗೆ ನಿರ್ದೇಶಕರು (ಪ್ರೌಢ ಶಿಕ್ಷಣ) ತಮ್ಮ ಟಿಪ್ಪಣಿ ಪತ್ರದಲ್ಲಿ ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸೇವಾ ಮಾಹಿತಿಯು ಮಹಾಲೇಖಪಾಲರ ಹಂತದಲ್ಲಿ ನಿರ್ವಹಣೆಯಾಗುತ್ತಿಲ್ಲ. ಇವರುಗಳು ಸ್ವತಂತ್ರ ಪತ್ರಾಂಕಿತ ಅಧಿಕಾರಿಗಳಾಗಿರುವುದಿಲ್ಲ ಹಾಗೂ ಸ್ವತಂತ್ರ ವೇತನ ಬಟವಾಡೆ ಅಧಿಕಾರಿಗಳಾಗಿರುವುದಿಲ್ಲವಾದ ಕಾರಣ, ಇವರುಗಳನ್ನು ಗ್ರೂಪ್-ಬಿ ವೃಂದದ ಸಿಬ್ಬಂದಿಗಳೆಂದು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಪರಿಗಣಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಿಸಿರುತ್ತಾರೆ. [ಪ್ರತಿ ಲಗತ್ತಿಸಿದೆ] ಆದ್ದರಿಂದ ಈಗಾಗಲೇ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಗ್ರೂಪ್-ಬಿ ಎಂದು ಅಳವಡಿಸಿಕೊಂಡಿರುವ ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಗುಂಪನ್ನು ಗ್ರೂಪ್-ಬಿ ಬದಲಾಗಿ ಗ್ರೂಪ್-ಸಿ ಎಂದು BACKEND ನಲ್ಲಿ ಮಾರ್ಪಾಡು ಮಾಡಲು ಹಾಗೂ PROMOTION MODULE ನಲ್ಲಿ NORMAL PROMOTION EFFECT ಮಾಡಿಕೊಳ್ಳುವಾಗ A, B ಗುಂಪು ಮಾತ್ರ ಲಭ್ಯವಿದ್ದು, ಇದರ ಜೊತೆಗೆ C ಸೇರಿಸಲು ಕೋರಿದೆ.

ತಮ್ಮ ನಂಬುಗೆಯ

[ಎಸ್.ಕಾತ್ಯಾಯನಿದೇವಿ]
ಜಂಟಿ ನಿರ್ದೇಶಕರು[ಆಡಳಿತ]

<u>ಪ್ರತಿಯನ್ನು:</u>

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ [ಇನ್ನು ಮುಂದೆ ಡಿಡಿಓ ರವರು ಈ ಸಂಬಂಧ ಯಾವುದೇ ಆನ್‌ಲೈನ್ ರಿಕ್ವೆಸ್ಟ್ ನೀಡದಿರಲು ತಿಳಿಸಿದೆ.]
4. ಕಛೇರಿ ಪ್ರತಿ.